ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ಕಾರಿಯವರ ನ್ಯಾಯಾಲಯ, ಕೊಡಗು

ಮಡಿಕೇರಿ

ಎಫ್‌ಡಿಪಿ ನಂ:೬/೧೩

ಪಿಡಬ್ಲ್ಯು- ೨

| | | |
|---|---|---|
| ಸಾಕ್ಷಿದಾರರ ಹೆಸರು | : | ಕುಸುಮ |
| ಗಂಡನ ಹೆಸರು | : | ಮಾಚಯ್ಯ |
| ವಯಸ್ಸು | : | ೫೫ ವರ್ಷ |
| ವೃತ್ತಿ | : | ತಹಶೀಲ್ದಾರರು |
| ವಾಸಸ್ಥಳ | : | ಮಡಿಕೇರಿ |

ದಿ: ೨೬-೦೨-೨೦೧೬ ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆ:-

ಅರ್ಜಿದಾರರ ತಂದೆಯಾದ ಹಂಸಾರವರಿಗೆ ೧೯೯೩-೯೪ ನೇ ಸಾಲಿನಲ್ಲಿ ಕೊಟ್ಟಂತಹ ಸಾಗುವಳಿ ಚೀಟಿಗೆ ಸಂಬಂಧಿಸಿದಂತೆ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ. ಹಂಸಾರವರಿಗೆ ಸಂಬಂಧಿಸಿದಂತೆ ನಮ್ಮ ಕಚೇರಿಯಲ್ಲಿ ಇಡಲಾದ ಕಡತ ನಿಪಿ-೪ ಆಗಿರುತ್ತದೆ.

ಪಾಟೀ ಸವಾಲು : ಶ್ರೀ. ಸಿ ಎಂ ಕೆ ವಕೀಲರಿಂದ:-

ಅಕ್ರಮ ಸಕ್ರಮ ಸಮಿತಿಗೆ ಯೂವುದೇ ವ್ಯಕ್ತಿ ಅರ್ಜಿ ಕೊಟ್ಟ ನಂತರ ಅದು ಮೊದಲು ಕಂದಾಯ ಪರಿವೀಕ್ಷಕರ ಹತ್ತಿರ ಪ್ರಾಥಮಿಕ ವರದಿಗಾಗಿ ಹೋಗುತ್ತದೆ, ನಂತರ ಸರ್ವೆಯರ್‌ಗೆ ಹೋಗಿ ಅತಿಕ್ರಮಣ ಮಾಡಿದ ಜಾಗವನ್ನು ಗುರುತಿಸುವ ಕಾರ್ಯ ಆಗುತ್ತದೆ, ನಂತರದಲ್ಲಿ ವರದಿಯು ತಾಲ್ಲೂಕು ಕಚೇರಿಗೆ ಬರುತ್ತದೆ. ಅಕ್ರಮ ಸಕ್ರಮ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ತಹಶೀಲ್ದಾರ್‌ರು ಅಂದರೆ ನಾನಾಗಿರುತ್ತೇನೆ. ಸರ್ವೆ ವರದಿ ಬಂದ ನಂತರ ತಹಶೀಲ್ದಾರ್‌ರು ಅಕ್ರಮ ಸಕ್ರಮ ಸಮಿತಿಯ ಮುಂದೆ ಅದನ್ನು ಇಡುತ್ತಾರೆ. ಆ ಸಮಿತಿಯಲ್ಲಿ ಆದೇಶವಾದ ನಂತರ ಮಂಜೂರಾದ ವ್ಯಕ್ತಿಗೆ ಟಿಟಿ ಶುಲ್ಕ ಮತ್ತು ಜಾಗದ ಕ್ರಯ ಕಟ್ಟಲು ನೋಟೀಸನ್ನು ಕಳುಹಿಸುತ್ತೇವೆ.

ಅಂತಹ ವ್ಯಕ್ತಿ ಕ್ರಯ ಮತ್ತು ಶುಲ್ಕವನ್ನು ಪಾವತಿಸಿದ ನಂತರ ಮಂಜೂರಾ ಪತ್ರ ಮತ್ತು ಸಾಗುವಳಿ ಚೀಟಿಯನ್ನು ಪಡೆದುಕೊಳ್ಳುತ್ತಾರೆ.

ಸಾಗುವಳಿ ಚೀಟಿಯ ಮೂಲ ಪ್ರತಿಯನ್ನು ಸಂಬಂಧಪಟ್ಟವರಿಗೆ ಕೊಟ್ಟು ಅದರ ನಕಲನ್ನು ಕಡತದಲ್ಲಿ ಇಟ್ಟುಕೊಳ್ಳುತ್ತೇವೆ. ಸಾಗುವಳಿ ಚೀಟಿಯ ಮೂಲ ಪ್ರತಿಯನ್ನು ನಾನು ಈಗ ನೋಡುತ್ತಿದ್ದೇನೆ, ಅದನ್ನು ಈಗ ನಿಪಿ-೨ ಎಂದು ಗುರುತಿಸಲಾಯಿತು. ನಿಪಿ-೨ರ ನಕಲು ಪ್ರತಿ ನಿಪಿ-೪ ಕಡತದಲ್ಲಿ ಇರುತ್ತದೆ ಎಂದರೆ ಸರಿ. ನಕಲು ಪ್ರತಿಯನ್ನು ನಿಪಿ-೪ ಎ ಎಂದು ಗುರುತಿಸಲಾಯಿತು.

ನಿಪಿ-೨ ರ ಪ್ರಕಾರ ಸರ್ವೆ ನಂ.೯೯/೬ ಮಂಜೂರಾದ ಜಾಗವಾಗಿದ್ದು ಅದರ ವಿಸ್ತೀರ್ಣ ೦.೨೦ ಸೆಂಟ್ಸ್ ಇತ್ತು, ನಂತರ ಅದು ದುರಸ್ತಿಗೆ ಕಳುಹಿಸಲಾಗಿ ಪಿಟಿ ಶೀಟ್‌ನಲ್ಲಿ ಸರ್ವೆ ನಂ.೯೯/೨೫ ಎಂದು ಗುರುತಿಸಿ ವಿಸ್ತೀರ್ಣ ಒಂದು ಎಕರೆ ಗುರುತಿಸಲಾಗಿತ್ತು, ಸಾಕ್ಷಿ ಮುಂದುವರೆದು ದುರಸ್ತಿ ಕಾರ್ಯ ಪೂರ್ಣಗೊಂಡಿಲ್ಲ ಎಂದು ನುಡಿಯುತ್ತಾರೆ.

ನಿಪಿ-೪ ಎ ರ ೩ನೇ ಪುಟದಲ್ಲಿ ಪೋಡಿ ದುರಸ್ತಿ ವರದಿ ಮೇಲೆ ಸರ್ವೆ ನಂ. ೯೯/೨೫ ರ ಒಂದು ಎಕರೆ ಎಂದು ತಿದ್ದುಪಡಿ ಮಾಡಿದೆ ಎಂದು ನಮೂದಿದೆ ಹಾಗಾದರೆ ದುರಸ್ತಿ ಆಗಿ ಅದನ್ನು ಗ್ರಾಮ ನಕಾಶೆಯಲ್ಲಿ ಇಂಡೀಕರಣ ಮಾಡಲಾಗಿದೆಯೇ ಎಂದರೆ ಸಾಕ್ಷಿ ನಮೂದಿಸಲಾಗಿದೆ ಆದರೆ ಇಂಡೀಕರಣ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

ನಿಪಿ-೫, ೬ ದಾವಾ ಆಸ್ತಿಗೆ ಸಂಬಂಧಿಸಿದ ಆರ್‌ಟಿಸಿ ಮತ್ತು ಮ್ಯೂಟೇಶನ್ ಪ್ರತಿಗಳು ಎಂದರೆ ಸರಿ. ಈಗಲೂ ನಿಪಿ-೫ ಚಾಲ್ತಿಯಲ್ಲಿ ಇದೆ ಎಂದರೆ ಸರಿ. ಮೂಲ ಪಿಟಿ ಶೀಟ್ ಪ್ರಕಾರ ಸರ್ವೆ ನಂ. ೯೯/೨೫ ರ ವಿಸ್ತೀರ್ಣ ಒಂದು ಎಕರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದನ್ನು ಮೂಲ ಸರ್ವೆ ನಂ. ೯೯/೧೪ ರಿಂದ ಬೇರ್ಪಡಿಸಲಾಗಿದೆ ಎಂದು ನುಡಿಯುತ್ತಾರೆ. ಪಿಟಿ ಶೀಟನ್ನು ದುರಸ್ತಿ ಮಾಡುವಾಗ ಸರ್ವೆ ಮಾಡಲು ಹೋದಾಗ ತಯಾರಿಸಿದ ಪಿಟಿ ಶೀಟಾಗಿರುತ್ತದೆ ಎಂದರೆ ಸರಿ. ಮೂಲ ಪಿಟಿ ಶೀಟನ್ನು ನಿಪಿ-೮ ಎಂದು ಗುರುತಿಸಲಾಯಿತು.

ಮಂಜೂರಾದ ನಂತರ ಸರ್ವೆ ಮಾಡಲು ಹೋದಾಗ ಗ್ರಾಮ ನಕಾಶೆಯನ್ನು ಆಧಾರವಾಗಿ ಇಟ್ಟುಕೊಂಡೇ ಮಾಡಲಾಗುತ್ತದೆ ಎಂದರೆ ಸರಿ. ಪಿಟಿ ಶೀಟಿನಲ್ಲಿ ತೋರಿಸಿದ ಒಂದು ಎಕರೆಗೆ ದುರಸ್ತಿ

ಸರ್ವೆ ಮಾಡಲಾಗಿತ್ತು ಎಂದರೆ ಸಾಕ್ಷಿ ಮಂಜೂರಾಗಿದ್ದು ೭೦ ಸೆಂಟ್ಸ್ ಆದ ಕಾರಣ ಅಷ್ಟಕ್ಕೇ ಸೀಮಿತಗೊಳಿಸಬೇಕಾಗುತ್ತದೆ ಎಂದು ನುಡಿಯುತ್ತಾರೆ. ಸರ್ವೆ ಕಾರ್ಯಕ್ಕೆ ಹೋದಾಗ ಆ ಜಾಗದಲ್ಲಿ ಬೇರೆಯವರ ಜಾಗ ನಕಾಶೆಯಲ್ಲಿ ಬಂದಿದ್ದ ಪಕ್ಷದಲ್ಲಿ ಅದನ್ನೂ ಕೂಡ ನಮೂದು ಮಾಡಲಾಗುತ್ತದೆ ಎಂದರೆ ಸರಿ. ನಿಪಿ-೮ ರಲ್ಲಿ ಬೇರೆಯವರ ಜಾಗದ ನಕಾಶೆ ಬಂದಿರುವ ಬಗ್ಗೆ ನಮೂದು ಇಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಹಾಲಿಯಾಗಿ ಸರ್ವೆ ನಂ. ೯೯/೨೫ ಕ್ಕೆ ಆಕಾರ್‌ಬಂದ್ ಇರುವುದಿಲ್ಲ. ಈಗ ಹಾಲಿಯಾಗಿ ಸರ್ವೆ ಶಾಖೆ ಮತ್ತು ತಹಶೀಲ್ದಾರ್ ಕಚೇರಿ ತಹಶೀಲ್ದಾರ್‌ರ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ. ದುರಸ್ತಿ ಮಾಡಿ ಇಂಡೀಕರಣಗೊಳಿಸಲು ಎಷ್ಟು ಸಮಯ ಬೇಕು ಎಂದರೆ ಸಾಕ್ಷಿ ಸಮಯ ನಿಗದಿತವಾಗಿ ಹೇಳಲು ಬರುವುದಿಲ್ಲ ಏಕೆಂದರೆ ಅದು ದುರಸ್ತಿಗೆ ಎಡಿಎಲ್‌ಆರ್ ಮತ್ತು ಡಿಡಿಎಲ್‌ಆರ್ ಕಚೇರಿಗೆ ಹೋಗುತ್ತದೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ನ್ಯಾಯಾಲಯದ ಆದೇಶದಂತೆ ಸ್ಥಳದಲ್ಲಿ ಸರ್ವೆ ಮಾಡಬೇಕಾದಲ್ಲಿ ಸರ್ವೆ ನಂ.೯೯/೨೫ ಕ್ಕೆ ದುರಸ್ತಿಯಾಗಿ ಗ್ರಾಮ ನಕಾಶೆಯಲ್ಲಿ ಇಂಡೀಕರಣವಾಗಬೇಕು ಎಂದರೆ ಸರಿ.

ಈಗ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಕಡತ ಯಾವ ಹಂತದಲ್ಲಿ ಇದೆ ಎಂದರೆ ಸಾಕ್ಷಿ ನಮೂನೆ ೧ ರಿಂದ ೫ ಆಗಿರುತ್ತದೆ ನಮೂನೆ ೬ ರಿಂದ ೧೦ ಭಾಗಕ್ಕೆ ಕಳುಹಿಸಿ ಸರ್ವೆ ಆಗಬೇಕಾಗುತ್ತದೆ ಎಂದು ನುಡಿಯುತ್ತಾರೆ.

ಸರ್ಕಾರದ ಆದೇಶದಂತೆ ವಿಶೇಷ ಪ್ರಕರಣಗಳಲ್ಲಿ ಬೇಗ ದುರಸ್ತಿ ಕಾರ್ಯ ಮಾಡಬಹುದು ಎಂದರೆ ಸಾಕ್ಷಿ ಏಕ ವ್ಯಕ್ತಿ ಪ್ರಕರಣದಲ್ಲಿ ವಿಶೇಷ ಪ್ರಕರಣ ಎಂದು ಗಣನೆಗೆ ತೆಗೆದುಕೊಳ್ಳಬಹುದು ಎಂದು ನುಡಿಯುತ್ತಾರೆ. ಈ ಪ್ರಕರಣವನ್ನು ಕೂಡ ಏಕ ವ್ಯಕ್ತಿ ಪ್ರಕರಣ ಎಂದು ಪರಿಗಣಿಸಿ ದುರಸ್ತಿ

ಕಾರ್ಯ ಮಾಡಬಹುದೇ ಎಂದರೆ ಸಾಕ್ಷಿ ಕಾರಣಗಳು ಬೇಕಾಗಿರುವುದರಿಂದ ನ್ಯಾಯಾಲಯದ ಆದೇಶವಿದ್ದಲ್ಲಿ ಮಾಡಬಹುದು ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇಲ್ಲ.

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-
ಜೆಎಂಎಫ್‌ಸಿ,ಮಡಿಕೇರಿ